ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
ಜ್ಞಾನ ಜ್ಯೋತಿ-ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No.080-22961016 / 22131385 E-Mail ID: registrar@bcu.ac.in

ಸಂಖ್ಯೆ: ಬೆಂ.ನ.ವಿ/ಶೈಕ್ಷಣಿಕ/ಸ್ನಾ.ಕೋ.ಪ್ರವೇಶ/08/2025-26 ದಿನಾಂಕ: 25.07.2025

## ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅಧಿಸೂಚನೆ

2025–26ನೇ ಶೈಕ್ಷಣಿಕ ಸಾಲಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ, ಸೆಂಟ್ರಲ್ ಕಾಲೇಜು ಆವರಣದ ಸ್ನಾತಕೋತ್ತರ ವಿಭಾಗಗಳು / ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಬ್ಯಾಟರಾಯನಪುರ ಬಾಗಲೂರು ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಈ ಕೆಳಕಂಡ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**(Through the UUCMS Online portal https://uucms.karnataka.gov.in/Login/Index)**

**ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ / ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಬ್ಯಾಟರಾಯನಪುರ ಬಾಗಲೂರು / ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ವಿಷಯಗಳು:**

**ಅ. ಕಲಾ ನಿಕಾಯ:**

ಎಂ.ಎ: ಕನ್ನಡ, ಇಂಗ್ಲೀಷ್, ಫ್ರೆಂಚ್, ಜರ್ಮನ್, ಸ್ಪಾನಿಷ್, ಜಪಾನೀಸ್, ಇತಿಹಾಸ, ಅರ್ಥಶಾಸ್ತ್ರ, ಸಮಾಜ ಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಕಾರ್ಯ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ನಗರ ಅಧ್ಯಯನ ಮತ್ತು ಯೋಜನೆ.

ಎಂ.ವಿ.ಎ: ಅನಿಮೇಷನ್ ಡಿಸೈನ್, ಇಂಟಿರಿಯರ್ ಡಿಸೈನ್, ಅಪ್ಲೈಡ್ ಆರ್ಟ್ಸ್, ಆರ್ಟ್ ಹಿಸ್ಟ್ರಿ ಪೇಯಿಂಟಿಂಗ್, ಪ್ರಿಂಟ್ ಮೇಕಿಂಗ್, ಸ್ಕಲ್ಪಚರ್.

**ಆ. ವಿಜ್ಞಾನ ನಿಕಾಯ:**

ಎಂ.ಎಸ್ಸಿ : ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಜೀವರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಉಡುಪು ತಂತ್ರಜ್ಞಾನ ಮತ್ತು ನಿರ್ವಹಣೆ, ಪರಿಸರ ವಿಜ್ಞಾನ, ಗಣಕ ವಿಜ್ಞಾನ, ಜೈವಿಕ ತಂತ್ರಜ್ಞಾನ, ಸೂಕ್ಷ್ಮಜೀವಶಾಸ್ತ್ರ, ಮನಃಶಾಸ್ತ್ರ, ಮಾನಸಿಕ ಸಮಾಲೋಚನೆ, ಸ್ಪೀಚ್ ಲ್ಯಾಂಗ್ವೇಜ್ ಪ್ಯಾಥಾಲಾಜಿ ಇಂಟೀರಿಯರ್ ಡಿಜೈನ್ ಅಂಡ್ ಡೆಕೊರೇಷನ್, ನ್ಯೂಟ್ರೀಷನ್ ಅಂಡ್ ಡೈಟಿಟಿಕ್ಸ್.

**ಇ. ಪಿಜಿ ಡಿಪ್ಲೋಮಾ – ಮನೋವೈಜ್ಞಾನಿಕ ಸಮಾಲೋಚನೆ**

**ಈ. ವಾಣಿಜ್ಯ ನಿಕಾಯ:**

ಎಂ.ಕಾಂ – ಮಾಸ್ಟರ್ ಆಫ್ ಕಾಮರ್ಸ್ (ಸಾಮಾನ್ಯ)

ಎಂ.ಕಾಂ – ಮಾಸ್ಟರ್ ಆಫ್ ಕಾಮರ್ಸ್ (ಫೈನಾನ್ಸಿಯಲ್ ಅನಾಲಿಸಿಸ್)



Scanned with OKEN Scanner

ಎಂ.ಕಾಂ– ಮಾಸ್ಟರ್ ಆಫ್ ಕಾಮರ್ಸ್ ( ಫಿನ್ ಟೆಕ್ )
ಎಂ.ಕಾಂ – ಮಾಸ್ಟರ್ ಆಫ್ ಕಾಮರ್ಸ್ (ಇಂಟರ್‌ನ್ಯಾಷನಲ್ ಬಿಸಿನೆಸ್)
ಎಂಟಿಟಿಎಂ – (ಮಾಸ್ಟರ್ ಆಫ್ ಟೂರಿಸಂ ಅಂಡ್ ಟ್ರ್ಯಾವೆಲ್ ಮ್ಯಾನೇಜ್‌ಮೆಂಟ್)

ಉ. ಪಿಜಿ ಡಿಪ್ಲೋಮಾ ಕೋರ್ಸ್‌ಗಳು

ಪಿಜಿಡಿ – (ಬಿಸಿನೆಸ್ ಅಡ್ಮಿನಿಸ್ಟ್ರೇಷನ್)
ಪಿಜಿಡಿ – (ಹ್ಯುಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್)
ಪಿಜಿಡಿ – (ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್)
ಪಿಜಿಡಿ – (ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್)

ಊ. ಶಿಕ್ಷಣ ನಿಕಾಯ: ಎಂ.ಎಡ್ (ಶಿಕ್ಷಣ)

**ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:**

1. ಅರ್ಹ ಅಭ್ಯರ್ಥಿಗಳು ಸ್ನಾತಕೋತ್ತರ ಕೋರ್ಸುಗಳಿಗೆ **UUCMS Portal** ಮೂಲಕವೇ **Online** ನಲ್ಲಿ ದಿನಾಂಕ: **26.07.2025** ರಿಂದ **https://uucms.karnataka.gov.in** ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.
2. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಹ ಕೋರ್ಸ್‌ಗಳಿಗೆ ಅರ್ಜಿಯನ್ನು ಸಲ್ಲಿಸಬಹುದು.
3. ಪದವಿಯ ಅಂತಿಮ ಪರೀಕ್ಷೆಗಳ ಫಲಿತಾಂಶ ನಿರೀಕ್ಷಿಸುತ್ತಿರುವ ಅಭ್ಯರ್ಥಿಗಳೂ ಸಹ ಅರ್ಜಿಯನ್ನು ಸಲ್ಲಿಸಬಹುದು.
4. ವಿದ್ಯಾರ್ಥಿಗಳು **ರೂ. 500/-**ಅರ್ಜಿ (ಪ.ಜಾ/ಪ.ಪಂ, ಪ್ರವರ್ಗ–I ಮತ್ತು ತೃತೀಯಲಿಂಗ ಅಭ್ಯರ್ಥಿಗಳಿಗೆ ರೂ. 250/- ಕರ್ನಾಟಕ ಅಭ್ಯರ್ಥಿಗಳಿಗೆ ಮಾತ್ರ) ಶುಲ್ಕದೊಂದಿಗೆ ಗರಿಷ್ಠ 3 ವಿಷಯಗಳಿಗೆ ಅರ್ಜಿ ಸಲ್ಲಿಸಲು **UUCMS Portal** ನಲ್ಲಿ ಅವಕಾಶ ಕಲ್ಪಿಸಿದೆ. ಹಾಗೂ 3 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಹೆಚ್ಚುವರಿಯಾಗಿ **ರೂ. 100/-**ಗಳನ್ನು ಪ್ರತಿ ವಿಷಯಕ್ಕೆ ಪಾವತಿಸಬೇಕಾಗಿರುತ್ತದೆ. ಅಭ್ಯರ್ಥಿಗಳು ಆನ್‌ಲೈನ್ ಮೂಲಕವೇ UUCMS Payment link ಮೂಲಕ ಪಾವತಿಸಬೇಕು.
5. ಅರ್ಹತೆ, ಸೀಟ್ ಮ್ಯಾಟ್ರಿಕ್ಸ್ ಮತ್ತು ಕೋರ್ಸುಗಳ ಶುಲ್ಕದ ಮಾಹಿತಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಲತಾಣ: http://bcu.ac.in ನ್ನು ಸಂಪರ್ಕಿಸಲು ಕೋರಿದೆ.
6. 2025-26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅರ್ಹ ಅಭ್ಯರ್ಥಿಗಳು ಆನ್‌ಲೈನ್‌ಯಲ್ಲಿ ಅರ್ಜಿಗಳನ್ನು **ದಿನಾಂಕ: 16.08.2025 ವರೆಗೆ ಯಾವುದೇ ದಂಡ ಶುಲ್ಕವಿಲ್ಲದೆ ಸಲ್ಲಿಸಬಹುದಾಗಿದ್ದು ಆನಂತರ ದಿನಾಂಕ: 22.08.2025 ರ ವರೆಗೆ ರೂ.250/- ದಂಡ ಶುಲ್ಕದೊಂದಿಗೆ ಸಲ್ಲಿಸಬಹುದಾಗಿದೆ.**
7. UUCMS ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.
8. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಭರ್ತಿ ಮಾಡಿದ ಮುದ್ರಿತ ಪ್ರತಿಯನ್ನು ಅಗತ್ಯವಿರುವ ಪೂರಕ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆಯ ಮುಖಾಂತರ ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ತಾವು ಅರ್ಜಿಯಲ್ಲಿ ಆಯ್ದುಕೊಂಡಿರುವ ವಿಷಯಗಳ ವಿಭಾಗದ **"ಅಧ್ಯಕ್ಷರುಗಳಿಗೆ ಪ್ರತ್ಯೇಕವಾಗಿ ಸಲ್ಲಿಸಲು ಕೋರಿದೆ, ವಿಳಾಸ: ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು**



Scanned with OKEN Scanner

ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು –560 001" ಕಳುಹಿಸತಕ್ಕದ್ದು.

9. ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಸಿದ ಅಥವಾ ಅಪೂರ್ಣವಾದ ಅರ್ಜಿಗಳನ್ನು ಯಾವುದೇ ಮಾಹಿತಿ ನೀಡದೇ ತಿರಸ್ಕರಿಸಲಾಗುವುದು.

10. **ಸೂಚನೆ**: ಯಾವುದೇ ಸ್ನಾತಕೋತ್ತರ ವಿಭಾಗಕ್ಕೆ ಕನಿಷ್ಠ 10 ವಿದ್ಯಾರ್ಥಿಗಳು ನೋಂದಣಿಯಾಗದಿದ್ದ ಪಕ್ಷದಲ್ಲಿ ವಿಶ್ವವಿದ್ಯಾನಿಲಯವು ಆ ಸ್ನಾಕತೋತ್ತರ ಕೋರ್ಸ್‌ನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಆರಂಭಿಸುವುದಿಲ್ಲ.
11. ಹೆಚ್ಚಿನ ಮಾಹಿತಿಗಾಗಿ ಕುಲಸಚಿವರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಮಿಂಚಂಚೆ: registrar@bcu.ac.in

ಆದೇಶದ ಮೇರೆಗೆ

ಕುಲಸಚಿವರು



Scanned with OKEN Scanner